ಫ್ಯಾಕ್ಸ್/Fax : 080-25586321
ಈಮೇಲ್/E-mail : ho@kspcb.gov.in
ವೆಬ್‌ಸೈಟ್/Website : http://kspcb.gov.in

☎ 25581383, 25589112
25588151, 25588270
25588142, 25586520

# ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ
# Karnataka State Pollution Control Board

"ಪರಿಸರ ಭವನ", 1 ರಿಂದ 5ನೇ ಮಹಡಿಗಳು, ನಂ. 49, ಚರ್ಚ್ ಸ್ಟ್ರೀಟ್, ಬೆಂಗಳೂರು - 560 001, ಕರ್ನಾಟಕ, ಭಾರತ
"Parisara Bhavana", 1st to 5th Floor, # 49, Church Street, Bengaluru - 560 001, Karnataka, INDIA

ಸಂಖ್ಯೆ: ಮಾನಿಮ/18/ಆಡಎ/2017-18/ 1566 ದಿನಾಂಕ: 06 SEP 2017

## ಅಧಿಸೂಚನೆ

ವಿಷಯ: ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯಲ್ಲಿನ ಸಹಾಯಕ ತೋಟಗಾರಿಕಾ ಅಧಿಕಾರಿಗಳ ರಾಜ್ಯ ವ್ಯಾಪಿ ಉಳಿಕೆ ಮೂಲ ವೃಂದದ ತಾತ್ಕಾಲಿಕ ಸೇವಾ ಜೇಷ್ಠತಾ ಪಟ್ಟಿಯನ್ನು ಪ್ರಕಟಿಸುವ ಬಗ್ಗೆ.

ಉಲ್ಲೇಖ: 1) ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ ಇವರ ಪತ್ರದ ಸಂಖ್ಯೆ: ಸಿಆಸುಇ 182 ಸೇಸೆನಿ 2011 ದಿನಾಂಕ: 06.05.2017.

2) ಸನ್ಮಾನ್ಯ ಸರ್ವೋಚ್ಚ ನ್ಯಾಯಾಲಯದ ಆದೇಶ ದಿನಾಂಕ: 09.02.2017 (Civil Appeal No. 2368 of 2011).

*******

ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ಲಿಪಿಕ ಮತ್ತು ತಾಂತ್ರಿಕೇತರ ಹುದ್ದೆಗಳ ವರ್ಗದ ಅಂತಿಮ ಜೇಷ್ಠತಾ ಪಟ್ಟಿಯನ್ನು ದಿನಾಂಕ: 06.05.2016 ರ ಅಧಿಸೂಚನೆ ಸಂಖ್ಯೆ: ಮಾನಿಮ/12/ ಆಡಎ/2015/325 ರಲ್ಲಿ ಪ್ರಕಟಿಸಲಾಗಿರುತ್ತದೆ.

ಮಾನ್ಯ ಸರ್ವೋಚ್ಚ ನ್ಯಾಯಾಲಯವು ಸಿವಿಲ್ ಅಪೀಲ್ ಸಂಖ್ಯೆ: 2368/2011 ಬಿ.ಕೆ. ಪವಿತ್ರ ಮತ್ತು ಇತರರು ವಿರುದ್ಧ ಯೂನಿಯನ್ ಆಫ್ ಇಂಡಿಯಾ ಪ್ರಕರಣದಲ್ಲಿ ದಿನಾಂಕ: 09.02.2017 ರಂದು ನೀಡಿರುವ ತೀರ್ಪಿನಲ್ಲಿ Karnataka Determination of Seniority of the Government servants promoted on the basis of Reservation (to the posts in the civil services of the state) Act 2002 ರ ಸೆಕ್ಷನ್ 3 ಮತ್ತು 4 ಅನ್ನು Ultra vires Articles 14 and 16 of the constitution ಎಂದು ಕಾನೂನನ್ನು ಪ್ರಚುರ ಪಡಿಸಿದೆ.

ಮಾನ್ಯ ಸರ್ವೋಚ್ಚ ನ್ಯಾಯಾಲಯವು ಬಿ.ಕೆ. ಪವಿತ್ರ ಪ್ರಕರಣದಲ್ಲಿ ದಿನಾಂಕ: 09.02.2017 ರಂದು ನೀಡಿದ ತೀರ್ಪಿನ ಹಿನ್ನಲೆಯಲ್ಲಿ ದಿನಾಂಕ: 27.04.1978ರ ಸರ್ಕಾರಿ ಆದೇಶದನ್ವಯ ಮುಂಬಡ್ತಿ ಮೀಸಲು ಅನ್ವಯವಾಗುವ ವೃಂದಗಳಿಗೆ ಮುಂಬಡ್ತಿ ನೀಡಿ ಪರಿಣಾಮವಾಗಿ ಲಭ್ಯವಾಗುವ ಜೇಷ್ಠತೆಯನ್ನು ನಿಗಧಿಪಡಿಸಿ ಪ್ರಕಟಿಸಿರುವ ಜೇಷ್ಠತಾ ಪಟ್ಟಿಗಳನ್ನು ಪುನರಾವಲೋಕನೆ ಮಾಡಲು ಸರ್ಕಾರ ದಿನಾಂಕ: 06.05.2017 ರ ಉಲ್ಲೇಖ (1) ರ ಆದೇಶದಲ್ಲಿ ಮಾರ್ಗಸೂಚಿಗಳನ್ನು ನೀಡಿರುತ್ತದೆ.

ಮೇಲ್ಕಂಡ ಹಿನ್ನಲೆಯಲ್ಲಿ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯಲ್ಲಿನ ಸಹಾಯಕ ತೋಟಗಾರಿಕಾ ಅಧಿಕಾರಿ ವೃಂದದವರ ಅಂತಿಮ ಜೇಷ್ಠತಾ ಪಟ್ಟಿಯನ್ನು ಪುನರಾವಲೋಕನೆ ಮಾಡಿ ಕರ್ನಾಟಕ ಸರ್ಕಾರಿ ನೌಕರರ (ಜೇಷ್ಠತೆ) ನಿಯಮಗಳು, 1957 ರ ನಿಯಮ 10 ರನ್ವಯ, ಅನುಬಂಧದಲ್ಲಿರುವಂತೆ ಮಂಡಳಿಯ ಸಹಾಯಕ ತೋಟಗಾರಿಕಾ ಅಧಿಕಾರಿಗಳ ರಾಜ್ಯ ವ್ಯಾಪಿ ಉಳಿಕೆ ಮೂಲ ವೃಂದದ ತಾತ್ಕಾಲಿಕ ಜೇಷ್ಠತಾ ಪಟ್ಟಿಯನ್ನು ತಯಾರಿಸಿ ಪ್ರಕಟಿಸಲಾಗಿದೆ. ಬಾಧಿತರಾದವರು ಇದ್ದಲ್ಲಿ, ಈ ತಾತ್ಕಾಲಿಕ ಜೇಷ್ಠತಾ ಪಟ್ಟಿಯನ್ನು ಹೊರಡಿಸಿದ ದಿನಾಂಕದಿಂದ 15 ದಿನಗಳೊಳಗಾಗಿ ತಮ್ಮ ಆಕ್ಷೇಪಣೆ:ಸಲಹೆಗಳನ್ನು ಅಧ್ಯಕ್ಷರು, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಇವರಿಗೆ ಸಲ್ಲಿಸತಕ್ಕದ್ದು. ನಿಗದಿತ ಅವಧಿ ಮೀರಿದ ನಂತರ ಸ್ವೀಕೃತವಾದ ಆಕ್ಷೇಪಣೆ : ಸಲಹೆಗಳನ್ನು ಪರಿಗಣಿಸಲಾಗುವುದಿಲ್ಲ.

6/9/17

ಅಧ್ಯಕ್ಷರು

ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ

**ಪ್ರತಿಗಳು:**

1) ಮಾನ್ಯ ಅಧ್ಯಕ್ಷರ ಆಪ್ತ ಸಹಾಯಕರಿಗೆ, ಅವರ ಗಮನಕ್ಕೆ ತರುವ ಸಲುವಾಗಿ.
2) ಸದಸ್ಯ ಕಾರ್ಯದರ್ಶಿಯವರ ಆಪ್ತ ಸಹಾಯಕರಿಗೆ, ಅವರ ತಮನಕ್ಕೆ ತರುವ ಸಲುವಾಗಿ.
3) ಮಂಡಳಿಯ ಮುಖ್ಯ ಹಾಗೂ ಹಿರಿಯ ಪರಿಸರ ಅಧಿಕಾರಿಗಳ ಮಾಹಿತಿಗಾಗಿ.
4) ಮಂಡಳಿಯ ಮುಖ್ಯ ಹಾಗೂ ಹಿರಿಯ ವೈಜ್ಞಾನಿಕ ಅಧಿಕಾರಿಗಳ ಮಾಹಿತಿಗಾಗಿ.
5) ಮಂಡಳಿಯ ಎಲ್ಲಾ ಪ್ರಾದೇಶಿಕ ಕಛೇರಿಗಳಲ್ಲಿನ ಅಧಿಕಾರಿ/ನೌಕರರ ಮಾಹಿತಿಗಾಗಿ.
6) ಮಂಡಳಿಯ ಎಲ್ಲಾ ಪ್ರಾದೇಶಿಕ ಪ್ರಯೋಗಾಲಯಗಳಲ್ಲಿನ ಅಧಿಕಾರಿ/ನೌಕರರ ಮಾಹಿತಿಗಾಗಿ.
7) ನಿಗಮಿತ ಕೋಶ ಹಾಗೂ ಕಾನೂನು ಕೋಶ, ಇವರುಗಳ ಮಾಹಿತಿಗಾಗಿ.
8) ಇ–ಆಡಳಿತ ಶಾಖೆಗೆ ಮಂಡಳಿಯ ಅಂತರ್ಜಾಲ ತಾಣದಲ್ಲಿ ಪ್ರಕಟಿಸಲು.
9) ಸೂಚನಾ ಫಲಕ/ಇತರೆ.

**ವಿಶೇಷ ಸೂಚನೆ:** ಮಂಡಳಿಯ ಎಲ್ಲಾ ಪ್ರಾದೇಶಿಕ ಕಛೇರಿಗಳ ಮುಖ್ಯಸ್ಥರು ಮತ್ತು ಪ್ರಾದೇಶಿಕ ಪ್ರಯೋಗಾಲಯಗಳಲ್ಲಿನ ಮುಖ್ಯಸ್ಥರು ಕಡ್ಡಾಯವಾಗಿ ತಮ್ಮ ತಮ್ಮ ಕಛೇರಿಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಅಧಿಕಾರಿ ಮತ್ತು ನೌಕರರ ಗಮನಕ್ಕೆ ತರಲು ಸೂಚಿಸಿದೆ ಹಾಗೂ ಅನುಬಂಧದಲ್ಲಿ ಲಗತ್ತಿಸಿರುವ ತಾತ್ಕಾಲಿಕ ಜೇಷ್ಠತಾ ಪಟ್ಟಿಗಳನ್ನು ಮಂಡಳಿಯ ಅಧಿಕೃತ ಜಾಲತಾಣ www.kspcb.gov.in ರಲ್ಲಿ ಡೌನಲೋಡ್ ಮಾಡಿಕೊಳ್ಳಲು ಸೂಚಿಸತಕ್ಕದ್ದು.

ಅನುಬಂಧ

ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ

ಮಂಡಳಿಯ ಸಹಾಯಕ ತೋಟಗಾರಿಕಾ ಅಧಿಕಾರಿ ಹುದ್ದೆಯ ರಾಜ್ಯ ವ್ಯಾಪಿ ಉಳಿಕೆ ಮೂಲ ವೃಂದಗಳ ಸೇವಾ ಜೇಷ್ಠತಾ ಪಟ್ಟಿ, ದಿನಾಂಕ: 01.07.2017 ರಲ್ಲಿದ್ದಂತೆ.

ಸನ್ಮಾನ್ಯ ಸರ್ವೋಚ್ಛ ನ್ಯಾಯಾಲಯದ ಆದೇಶ, ದಿನಾಂಕ: 09.02.2017 ರ ಅನ್ವಯ (Civil Appeal No. 2368 of 2011)

| ಕ್ರ.ಸಂ | ಅಧಿಕಾರಿಯ ಹೆಸರು ಶ್ರೀ/ಶ್ರೀಮತಿ | ವರ್ಗ | ಹುಟ್ಟಿದ ದಿನಾಂಕ | ಕಾನೂನು ಸಹಾಯಕರ ಹುದ್ದೆಗೆ ನೇಮಕಗೊಂಡ ದಿನಾಂಕ | ಕಾನೂನು ಸಹಾಯಕರ ಹುದ್ದೆಗೆ ಹಾಜರಾದ ದಿನಾಂಕ | ಷರಾ |
|---|---|---|---|---|---|---|
| 1 | ದಿನೇಶ್ ಕೆ.ಪಿ. | | 24.06.1975 | 25.02.2014 | 28.02.2014 | |

6/9/17

ಅಧ್ಯಕ್ಷರು

ಕ.ರಾ.ಮಾ.ನಿ.ಮಂ.